O.S.No.:222/2014
P.W.:2

ಈ ದಿನ ದಿಃ 11.11.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಟಿ.ಕೆ.ಎ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಸಂಗತಿಗಳು ನನಗೆ ತಿಳಿದಿರುತ್ತವೆ ಹಾಗೂ ನಾನು ಸದರಿ ಪ್ರಮಾಣ ಪತ್ರಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ.

ನಮ್ಮ ಕುಟುಂಬದ ವಂಶವೃಕ್ಷ, ಎಂ.ಆರ್.ಹೆಚ್.6 ನ ಪ್ರತಿ, ಸರ್ವೆ ನಂ.72/3 ರ 4 ಕೈಬರಹ ಪಹಣಿ ಪತ್ರಿಕೆಗಳು, ಸರ್ವೆ ನಂ.72/3 ರ ಎರಡು ಮುದ್ರಿತ ಪಹಣಿ ಪತ್ರಿಕೆ, ಆಕಾರ್ ಬಂದ್ ಪ್ರತಿ, ಸರ್ವೆ ನಂ.72/3 ರ ಸ್ಕೆಚ್, ಸರ್ವೆ ನಂ.72/3 ರ ಹಿಸ್ಸಾ ಮೊಜನಿಯನ್ನು ಮತ್ತು ವಿಶೇಷ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 8 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ.ಎಸ್.ಆರ್ ವಕೀಲರಿಂದಃ-**

ನನ್ನ ತಾತನ ಹೆಸರು ಕಾಡ. ಸದರಿ ಕಾಡನಿಗೆ ತಮ್ಮ ಇಲ್ಲ. ವೀರಭದ್ರೇಗೌಡ ಮತ್ತು ಕಾಡೇಗೌಡ ಇಬ್ಬರು ಅಣ್ಣತಮ್ಮಂದಿರು ಎಂದರೆ ಸರಿಯಲ್ಲ. ನನ್ನ ತಾತ ಕಾಡನ ತಂದೆಯ ಹೆಸರು ವೀರಭದ್ರೇಗೌಡ. ವೀರಭದ್ರೇಗೌಡನ ಜೊತೆ ಒಡಹುಟ್ಟಿದವರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ವೀರಭದ್ರೇಗೌಡ ಮತ್ತು ಕಾಡೇಗೌಡ ಇಬ್ಬರು ಅಣ್ಣತಮ್ಮಂದಿರು ಎಂದರೆ ಸರಿಯಲ್ಲ. ನನ್ನ ತಾತ ಕಾಡ ಮತ್ತು ಮಾರೇಗೌಡ ಅಣ್ಣ ತಮ್ಮಂದಿರು ಎಂದರೆ ಸರಿಯಲ್ಲ. ದಿ.10.06.1966 ರಲ್ಲಿ ನನ್ನ ತಂದೆ ವೀರಭದ್ರೇಗೌಡ ಮತ್ತು ನನ್ನ ಚಿಕ್ಕಪ್ಪ ಮಾರೇಗೌಡ ದಾವಾಸ್ವತ್ತನ್ನು ಚೂಡೇಲಿಂಗೇಗೌಡ ಉಃ ಶಿವಣ್ಣ ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಮಾರಾಟವಾದ ದಿನದಿಂದ ಸದರಿ ಜಮೀನನ್ನು ಅವರಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಚೂಡಲಿಂಗೇಗೌಡ ಉಃ ಶಿವಣ್ಣ ಸದರಿ ಜಮೀನನ್ನು 1962 ರಲ್ಲಿ ಪ್ರತಿವಾದಿಯ ತಂದೆ ವೀರಭದ್ರೇಗೌಡ, ಬಾಳೇಗೌಡ ಮತ್ತು ಭದ್ರಗಿರಿಗೌಡ ರವರಿಗೆ ಜಂಟೀಯಾಗಿ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ

ದಿನಾಂಕದಿಂದ ಪ್ರತಿವಾದಿಗಳೆ ದಾವಾಸ್ವತ್ತಿನ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಮಾರಾಟ ಮಾಡಿದ ನಂತರ ನಾನು ಯಾವತ್ತು ಸಹ ದಾವಾಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಪ್ರಾಸಾ-1 ರವರ ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪ್ರಾಸಾ-1 ರವರ ಮುಂದುವರೆದ ಪಾಟೀ ಸವಾಲನ್ನು ಮುಂದಿನ ಮುದ್ದತ್ತಿಗೆ ಮುಂದುಡಲಾಯಿತು.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.